M.V.C .NO. 1175/2024
PW–1
dated: 24–09–2025.

ಸಾಕ್ಷಿಯನ್ನು ಈ ದಿನ ದಿನಾಂಕ 24–09–2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಪಾಟೀ ಸವಾಲುಃ 2 ನೇ ಎದುರುದಾರ ಪರವಾಗಿ ಶ್ರೀ ಪಿ ವಿ ಎಮ್ ವಕೀಲರಿಂದಃ.

ಆ ದಿನ ನಾವು ಹೊಗುತ್ತಿದ್ದ ಮೊಟರ ಸೈಕಲ ನಮ್ಮ ಅಳಿಯನದ್ದು ಇತ್ತು. ನನ್ನ ಚಾಲನಾ ಪತ್ರ ಇದೆ. ಅದನ್ನು ಹಾಜರುಪಡಿಸುತ್ತೇನೆ. ನಾನು ಹೇಳುತ್ತಿದ್ದ ಉದ್ಯೊಗ ಮತ್ತು ತಿಂಗಳ ಸಂಪಾದನೆ ಮಾಡುತ್ತಿದ್ದೆ ಎನ್ನುವುದಕ್ಕೆ ಯಾವುದೇ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿ. ನಾನು ರಸ್ತೆಯಲ್ಲಿ ಹೊಗುವಾಗ ಸಮಗಮವಾಗಿ ವಾಹನಗಳು ಸಾಗದಂತೆ ನನ್ನ ವಾಹನ ನಿಲ್ಲಿಸಿರುವರಿಂದ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ನನ್ನ ಎಡ ಗೈ ಬುಜಕ್ಕೆ ಬಲಗಾಲು ಮತ್ತು ನಡಕ್ಕೆ ಪೆಟ್ಟಾಗಿರುತ್ತದೆ. ನನ್ನ ಎಡ ಬುಜದ ಮತ್ತು ಬಲಗಾಲಿನ ಶಸ್ತ್ರ ಕ್ರಿಯೆ ಮಾಡಿರುತ್ತಾರೆ. ಸಾಕ್ಷಿ ಮುಂದುವರೆದು ನನ್ನ ನಡಕ್ಕೆ ಆದ ಪೆಟ್ಟಿಗೆ ಬೆಲ್ಟ ಹಾಕಿರುತ್ತಾರೆ. ನಾನು ಆಸ್ಪತ್ರೆ ಯಲ್ಲಿ ಸುಮಾರು 11 ದಿನ ದಾಖಲಿದ್ದೇನು. ನಾನು ಪ್ರಸ್ತುತ ಪ್ರಕರಣದಲ್ಲಿ ಹಾಜರುಪಡಿಸಿದ ಮೆಡಿಕಲ ಬಿಲ್ಲು ಹೊರತು ಪಡಿಸಿ ಬೇರೆ ಯಾವುದು ಬಿಲ್ಲು ಇರುವುದಿಲ್ಲ. ನಾನು ಈಗಲೂ ಸಹ ಮೊದಲಿನಂತೆ ಈಗಲೂ ವ್ಯಾಪಾರ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ಅಂಗ ನ್ಯೂನ್ಯತೆ ಪ್ರಮಾಣ ಪತ್ರ ನನಗೆ ಚಿಕಿತ್ಸೆ ನೀಡಿದ ವೈಧ್ಯರು ನೀಡಿದ ಅಂಗ ನ್ಯೂನ್ಯತೆ ಪ್ರಮಾಣ ಪತ್ರ ಇರುತ್ತದೆ. ನಾನು ಮೊದಲಿನಂತೆ ಕೆಲಸ ಮಾಡುತ್ತಿದ್ದರೂ ಸಹ ಅಂಗ ನ್ಯೂನ್ಯತೆಯಿಂದ ಬಳಲುತ್ತಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವು ನನ್ನ ತಪ್ಪಿನಿಂದ ಆಗಿದೆ ಎಂದು ಒಪ್ಪಿಕೊಂಡರೇ ಪರಿಹಾರ ಹಣ ಸಿಗುವುದಿಲ್ಲ ಅಂತಾ ಅಪಘಾತ ನನ್ನ ತಪ್ಪಿನಿಂದ ಆಗಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

M.V.C .NO. 1175/2024
PW–1
dated: 24–09–2025.

ಪಾಟೀ ಸವಾಲುಃ 1 ನೇ ಎದುರುದಾರ ಮತ್ತು ಅವರ ಪರ ವಕೀಲರನ್ನು ಕೂಗಿಸಲಾಗಿ ಗೈರು ಹಾಜರು ಇರುತ್ತಾರೆ. ಆದ್ದರಿಂದ 1 ನೇ ಎದುರುದಾರರ ಪರ ಸಾಕ್ಷಿಯ ಪಾಟಿ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ಮರು ವಿಚಾರಣೆಃ ಇಲ್ಲ.

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಬೈಲಹೊಂಗಲ.